# ಬುದ್ಧಿವಂತನಲ್ಲ ರಂಗನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 408.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 108.
3. **Note:** This song is not available in the books of Shri Betageri Krishna Sharma and Shri Bengeri Huchha Rayaru also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same.
5. Note: Singer has followed these lyrics.

ರಾಗ: ಪಂತುವರಾಳಿ ತಾಳ: ಅಟ

ಬುದ್ಧಿವಂತನಲ್ಲ ರಂಗನು || ಪ ||
ಮುದ್ದು ಮಾಡಿ ಮಗನ ಸಲಹಿದೆ ಗೋಪಿ || ಅಪ ||

ಆವು ಕಾಯ ಪೋಗಿ ಯಮುನಾ ತೀರದಲಿ ಮ-
ಡುವ ಧುಮುಕಿ ಕಾಳಿಂಗನ ಹೆಡೆ ತುಳಿದನೆ || 1 ||

ಹೆಡೆಯ ತುಳಿದು ಹಾವಿನ ಮೇಲೆ ಮಲಗಿ
ಕಡು ನಿದ್ರೆಗೈವನು ಸಾಧು ಬಾಲಕನೆ || 2 ||

ಹದ್ದನೇರಿಕೊಂಡು ಜಗವೆಲ್ಲ ತಿರುಗಿ
ಗೆದ್ದು ಬಾಹೋ ಬುದ್ಧಿ ಇವಗೇಕೆ || 3 ||

ಮಾರಬಂದ ಹಣ್ಣು ಹೆಡಿಗೆ ಸೂರೆಗೊಂಬ
ವಾರುಣಾದಿಂದಲಿ ಬೈಸಿಕೊಂಬನೆ || 4 ||

ಗಂಡನುಳ್ಳ ಹೆಂಡಿರ ಕೊಂಡು ಒಯ್ದು ಅವರ
ಭಂಡು ಮಾಡುವನೀ ಪುರಂದರ ವಿಠಲ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಅವು** – ಹಸುಗಳನ್ನು.

**ಮಡುವು** – ಕಾಳಿಂದಿಮಡುವು.

**ಹದ್ದನು** – ಗರುಡನನ್ನು.

**ಬಾಹೋ** – ಬರುವ.

**ಮಾರಬಂದ** – ಮಾರಲಿಕ್ಕೆ ಬಂದ

**ವಾರಣದಿಂದಲಿ** – ತಡೆದು.

**ಹೆಡಗೆ** = ದೊಡ್ಡ ಬುಟ್ಟಿ

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** buddi, ranga, maga, gopi, Yamuna, kalinga, Krishna, nidre, uraga, loka, haddu, hannu, bayyi,
**Pravachana:** NA
**Explanation:** NA